# ಕರ್ನಾಟಕ ಸರ್ಕಾರ

## ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು-12

## ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ನಡವಳಿಗಳು

ವಿಷಯ: 2015-16ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹೊಸ / ಹೆಚ್ಚುವರಿ ವಿಷಯಗಳು / ಸಂಯೋಜನೆಗಳು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ರಾಜ್ಯದ ಜಿಲ್ಲಾ ಉಪ ನಿರ್ದೇಶಕರಿಂದ ಬಂದ ಪ್ರಸ್ತಾವನೆಗಳು.
2. ಸಾರ್ವಜನಿಕರಿಂದ / ಚುನಾಯಿತ ಪ್ರತಿನಿಧಿಗಳಿಂದ ಬಂದಿರುವ ಮನವಿಗಳು.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 507 ಎಸ್.ಹೆಚ್.ಹೆಚ್. 2013, ದಿನಾಂಕ 20-05-2015.

-----

ಪ್ರಸ್ತಾವನೆ:-

2015-16ನೇ ಶೈಕ್ಷಣಿಕ ಸಾಲಿನಿಂದ ಬೇಡಿಕೆ ಇರುವ ರಾಜ್ಯದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹೊಸ/ಹೆಚ್ಚುವರಿ ವಿಷಯಗಳು/ಸಂಯೋಜನೆಗಳು ಪ್ರಾರಂಭಿಸಬೇಕೆಂದು ರಾಜ್ಯ ಜಿಲ್ಲಾ ಉಪ ನಿರ್ದೇಶಕರಿಂದ ಹಾಗೂ ಸಾರ್ವಜನಿಕರಿಂದ/ಚುನಾಯಿತ ಪ್ರತಿನಿಧಿಗಳಿಂದ ಉಲ್ಲೇಖಿತ (1) ಮತ್ತು (2)ರ ಪತ್ರಗಳಲ್ಲಿ ದಿನಾಂಕ 22-06-2015ಕ್ಕೆ ಅಂತ್ಯಗೊಂಡಂತೆ ಕಳೆದ ಕೆಲವು ವರ್ಷಗಳಿಂದ ಪದವಿ ಪೂರ್ವ ಕಾಲೇಜುಗಳ ಬೇಡಿಕೆ ಹೆಚ್ಚುತ್ತಿದೆ. ಅದರಲ್ಲಿಯೂ ವಾಣಿಜ್ಯ ಸಂಯೋಜನೆಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯ, ಸಮೀಪದಲ್ಲಿ ಲಭ್ಯವಿರುವ ಶಾಲೆಗಳು, ಗ್ರಾಮ ಅಥವಾ ಪಟ್ಟಣದಿಂದ ಕಾಲೇಜಿನ ಅಂತರ ಹಾಗು ಆ ಭಾಗದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಿ ಆಯ್ಕೆ ಮಾಡುತ್ತಿರುವ ಸಂಯೋಜನೆ ಹಾಗು ಸ್ಥಳೀಯ ಬೇಡಿಕೆ ಈ ರೀತಿ ಹಲವಾರು (ಕ್ರೈಟೀರಿಯಾ)ಗಳನ್ನು ಆಧರಿಸಿ, ಪದವಿ ಪೂರ್ವ ಕಾಲೇಜುಗಳ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವೆಂದು ಕಂಡುಬರುತ್ತದೆ. ಈ ಶೈಕ್ಷಣಿಕ ಸಾಲಿನಲ್ಲಿ 2014-15ರಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶವು ಶೇ:85%ರಷ್ಟು ಆಗಿರುವ ಹಿನ್ನಲೆಯಲ್ಲಿ ಪದವಿ ಪೂರ್ವ ಕಾಲೇಜಿಗೆ ದಾಖಲಾತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರ ಜೊತೆಗೆ ಸತತವಾಗಿ ಮೂರು ಹಾಗು ಮೇಲ್ಪಟ್ಟ ವರ್ಷಗಳಿಂದ ಅತೀ ಕಡಿಮೆ ಅಥವ ಶೂನ್ಯ ವಿದ್ಯಾರ್ಥಿ ದಾಖಲಾತಿ ಸಂಖ್ಯೆಯನ್ನು ಸಹ ಕೆಲವು ಪದವಿ ಪೂರ್ವ ಕಾಲೇಜುಗಳಲ್ಲಿ ಕಂಡುಬರುತ್ತಿದ್ದು, ಅಂತಹ ಕಾಲೇಜುಗಳಲ್ಲಿ ಬೋಧಕರಿಗೆ ಯಾವುದೇ ಕಾರ್ಯವಿಲ್ಲದೆ ಅವರ ಕೌಶಲ್ಯವನ್ನು ಇಲಾಖೆಯಿಂದಲೇ ಕುಗ್ಗಿಸಿದಂತಾಗುತ್ತದೆ. ಅವರಿಗೆ ಯಾವುದೇ ಶೈಕ್ಷಣಿಕ ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಪ್ರಸ್ತುತ ನಿಯಮಾವಳಿಗಳಲ್ಲಿ ಕಾರ್ಯವಿಲ್ಲದ ಉಪನ್ಯಾಸಕರಿಗೆ ಹೆಚ್ಚುವರಿ. ಕಾರ್ಯಭಾರವಹಿಸಲು ಅವಕಾಶವಿರುತ್ತದೆ. ಹಲವಾರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧನೆ ಇಲ್ಲದೆ ವಿದ್ಯಾರ್ಥಿಗಳು ದಾಖಲಾತಿ ಸಹ ಪಡೆಯುವುದಿಲ್ಲ. ಅವಶ್ಯವಿರುವ ಮೂಲಭೂತ ಸೌಕರ್ಯವಿಲ್ಲದೆ ಅಲ್ಲಿಯ ಶೈಕ್ಷಣಿಕ (Performance) ಫಲಿತಾಂಶ ಕುಂಟಿತವಾಗುತ್ತಿದೆ. ಆದ್ದರಿಂದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು / ಶೈಕ್ಷಣಿಕ ಗುಣಮಟ್ಟವನ್ನು / ಶೈಕ್ಷಣಿಕ ಚಟುವಟಿಕೆಗಳನ್ನು ಬಲಪಡಿಸುವ ಅನಿವಾರ್ಯತೆ ಕಂಡುಬಂದಿದೆ.

**ಆದೇಶ ಸಂಖ್ಯೆ: ಪಪೂಶಿ/ಶೈ.ಶಾಖೆ/ಹೊ.ಸಂ.ಮಂ/2015-16** **ದಿನಾಂಕ 26-06-2015**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಎಲ್ಲಾ ಅವಶ್ಯ ಮಾಹಿತಿಗಳನ್ನು ಕ್ರೂಢೀಕರಿಸಿ ಹುದ್ದೆ, ಕಾರ್ಯಭಾರ, ಹಂಚಿಕೆ ಹಾಗು ಸಂಯೋಜನೆ ಇತ್ಯಾದಿಗಳ ಮರುಹಂಚಿಕೆ ಮಾಡುವ ಅವಶ್ಯಕತೆ ಕಂಡು ಬರುತ್ತಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗು ಕಾಲೇಜುಗಳ ಶೈಕ್ಷಣಿಕ

....2

ಅಭಿವೃದ್ಧಿಯನ್ನು ಪರಿಗಣಿಸಿ, ತಕ್ಷಣಕ್ಕೆ ಜಾರಿಗೆ ಬರುವಂತೆ ಹಾಗು ಮುಂದಿನ ಆದೇಶದವರೆಗೆ 2015ನೇ ಶೈಕ್ಷಣಿಕ ಸಾಲಿನಿಂದ ಹೊಸ/ಹೆಚ್ಚುವರಿ ವಿಷಯ/ಸಂಯೋಜನೆ/ವಿಭಾಗಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಹೊಸದಾಗಿ ವಿಷಯಗಳನ್ನು ಬೋಧನೆ ಮಾಡಲು ಅಥವಾ ಹೆಚ್ಚುವರಿ/ಹೊಸ ಸಂಯೋಜನೆಯ ವಿಷಯಗಳ ಬೋಧನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲೆಯ ಉಪ ನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ ಬೇರೆ ಕಡೆ ಅದೇ ವಿಷಯವನ್ನು ಬೋಧಿಸುತ್ತಿರುವ ಉಪನ್ಯಾಸಕರ ಕಾರ್ಯಭಾರವನ್ನು ಪರಿಶೀಲಿಸಿ, ಕಡಿಮೆ ಕಾರ್ಯಭಾರವಿದ್ದವರಿಗೆ ಕೆಳಕಂಡ ಕಾಲೇಜುಗಳಿಗೆ ಬೋಧನೆ ಮಾಡಲು ನಿಯಮಾನುಸಾರ ಸೂಚಿಸುವುದು ಹಾಗು ಜಿಲ್ಲೆಗೆ ಒಟ್ಟು ಕ್ರೋಢೀಕರಿಸಿದ ವಿವರಗಳನ್ನು ನಿರ್ದೇಶಕರಿಗೆ ವಿದ್ಯಾರ್ಥಿಗಳ ದಾಖಲಾತಿ ಮುಗಿದ ನಂತರ 15 ದಿನಗಳೊಳಾಗಿ ಕಳುಹಿಸಿಕೊಡುವುದು.

ಈ ಕೆಳಕಂಡಂತೆ **ಬೀದರ್ ಜಿಲ್ಲೆಗೆ** ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹೊಸ / ಹೆಚ್ಚುವರಿ ವಿಷಯ / ಸಂಯೋಜನೆ / ವಿಭಾಗಗಳನ್ನು ಪ್ರಾರಂಭಿಸಲು ಆದೇಶಿಸಿದೆ.

| ಕ್ರಮ ಸಂ | ಕಾಲೇಜುಗಳ ಹೆಸರು ಮತ್ತು ವಿಳಾಸ . | ವಿಷಯ | ಸಂಯೋಜನೆ | ಹೆಚ್ಚುವರಿ ಸಂಯೋಜನೆ |
|---|---|---|---|---|
| 1 | ಸರ್ಕಾರಿ ನಿಲಂಭಿಕಾ ಪದವಿ ಪೂರ್ವ ಕಾಲೇಜು ಬಸವಕಲ್ಯಣ, | ಉರ್ದು ಮತ್ತು ಇಂಗ್ಲೀಷ್ | - | ಹೆಚ್‌ಇ ಪಿಎಸ್ |
| 2 | ಸರ್ಕಾರಿ ಪದವಿ ಪೂರ್ವ ಕಾಲೇಜು ಹಲಬುರ್ಗ ಭಾಲ್ಕಿ | ಇಂಗ್ಲೀಷ್ | - | - |
| 3 | ಸರ್ಕಾರಿ ಪದವಿ ಪೂರ್ವ ಕಾಲೇಜು ಬೇಮಲ್ಕೇಡ್ ಹುಮ್ನಾಬಾದ್ | ಹಿಂದಿ | - | - |
| 4 | ಸರ್ಕಾರಿ ಪದವಿ ಪೂರ್ವ ಕಾಲೇಜು ತಾನುಕುಶನೂರು, ಔರದ್ ತಾ | ಉರ್ದು ಮತ್ತು ಹಿಂದಿ | - | - |
| 5 | ಸರ್ಕಾರಿ ಪದವಿ ಪೂರ್ವ ಕಾಲೇಜು ಮುನ್ನಾಲ್ಲಿ | - | - | ವಾಣಿಜ್ಯ |
| 6 | ಸರ್ಕಾರಿ ಬಾಲಿಕಿಯರ ಪದವಿ ಪೂರ್ವ ಕಾಲೇಜು, ಚಿತ್ತಾಗುಪ್ಪ ಹುಮ್ನಾಬಾದ್, | ಇಂಗ್ಲೀಷ್ ಮತ್ತು ಉರ್ದು | - | - |
| 7 | ಸರ್ಕಾರಿ ಪದವಿ ಪೂರ್ವ ಕಾಲೇಜು ಬಸವಕಲ್ಯಣ | ಉರ್ದು | - | - |
| 8 | ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಟಳ ಬಸವಕಲ್ಯಣ | - | - | ವಾಣಿಜ್ಯ |
| 9 | ಸರ್ಕಾರಿ ಪದವಿ ಪೂರ್ವ ಕಾಲೇಜು, ಹಳಹಳ್ಳಿ(ಕೆ) ಹಳ್ಳಿಕೇಡ್ ಭಾಲ್ಕಿ | ಹಿಂದಿ | - | ವಾಣಿಜ್ಯ |
| 10 | ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀದರ್ ಜಿಲ್ಲೆ | ಕನ್ನಡ, ಇಂಗ್ಲೀಷ್ | - | ಹೆಚ್‌ಇ ಪಿಎಸ್ |
| 11 | ಸರ್ಕಾರಿ ಪದವಿ ಪೂರ್ವ ಕಾಲೇಜು, ದುಬಲ್‌ಗೊಂಡಿ, ಹುಮ್ನಾಬಾದ್, | ಹಿಂದಿ | - | - |
| 12 | ಸರ್ಕಾರಿ ಪದವಿ ಪೂರ್ವ ಕಾಲೇಜು, ಭಾಲ್ಕಿ | ಹಿಂದಿ, ಮರಾಠಿ, ಮತ್ತು ಉರ್ದು | - | - |

....3

| | | | | |
|---|---|---|---|---|
| 13 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕಂತಾನ, | ಉರ್ದು | – | – |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ:

1. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಶಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ.
3. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾರದ ಕಾಂಪ್ಲೇಕ್ಸ್, ಶಿವನಗರ, ಉದ್ದರ್ ರಸ್ತೆ, ಬೀದರ್–585 401.
4. ಕಛೇರಿ ಪ್ರತಿ